

ಅಭಿವೃದ್ಧಿ ಕಂಡ ಊರ ಶಾಲೆ


ಡಾಂಬರೀಕರಣಗೊಂಡ ಹಬ್ಬತ್ತನಹಳ್ಳಿ ರಸ್ತೆ

ಕೆಲಸದಲ್ಲಿ ತೊಡಗುವುದು ಅವರ ಇಷ್ಟದ ಕಾಯಕ. ಮಣ್ಣಿನೊಂದಿಗೆ ಬೆರೆತಾಗ ತಾವೊಬ್ಬ ನ್ಯಾಯಾಧೀಶ ಅನ್ನೋದನ್ನೇ ಮರೆಯುತ್ತಾರೆ. ಆಳುಗಳೊಂದಿಗೆ ಆಳಾಗಿ ದುಡಿಯುವ ಜಾಯಮಾನ ಅವರದ್ದು. ಕೋರ್ಟ್‌ನಲ್ಲಿ ಇದ್ದಾಗ ಜಡ್ಜ್, ಹೊಲದಲ್ಲಿ ರೈತ.

## ಅಂತರ್ಜಲ ವೃದ್ಧಿಯ ಯಶಸ್ಸು

ತಮ್ಮ ಊರಿನ ಸಮುದಾಯದ ಕೆಲಸಗಳಿಗೂ ಮೋಹನ್ ಅವರು ನೆರವಾಗಿದ್ದಾರೆ. ಸರ್ಕಾರದ ಸಣ್ಣ ನೀರಾವರಿ ಇಲಾಖೆ ಹಾಗೂ ನರೇಗಾ ಅನುದಾನದಲ್ಲಿ ಹಬ್ಬತ್ತನಹಳ್ಳಿ ಕೆರೆಗೆ ನೀರು ಹರಿದು ಹೋಗುವ ಕಾಲುವೆಗಳಿಗೆ ಅಲ್ಲಲ್ಲಿ ಚೆಕ್ ಡ್ಯಾಂಗಳ ನಿರ್ಮಾಣ ಇವರ ಮುತುವರ್ಜಿಯಿಂದಲೇ ಆಗಿದೆ. ಇದರಿಂದಾಗಿ ಸುತ್ತಮುತ್ತ ರೈತರ ಕೊಳವೆ ಬಾವಿಗಳಲ್ಲಿ ಜಲ ಮರುಪೂರಣಗೊಂಡಿದೆ. ರೈತರು ಅಡಿಕೆ, ತೆಂಗು ಯಥೇಚ್ಛವಾಗಿ ಬೆಳೆಯಲು ಇದು ನೆರವಾಗಿದೆ ಕೂಡ.

ಊರಿನ ರಸ್ತೆಗಳು ಗುಣಮಟ್ಟದ ಡಾಂಬರು ಕಂಡಿವೆ. ಒಳಚರಂಡಿ ವ್ಯವಸ್ಥೆ ಸರಿ ಹೋಗಿದೆ. ಕುಡಿಯುವ ನೀರಿದೆ. ದೇವಸ್ಥಾನಗಳು ಜೀರ್ಣೋದ್ಧಾರಗೊಂಡು ಅವೆಲ್ಲವೂ ಸೌಹಾರ್ದದ ತಾಣಗಳಾಗಿ ಬದಲಾಗಿವೆ. ಸಿಎಸ್‌ಆರ್ ಅನುದಾನದಲ್ಲಿ ಅವರು ಓದಿದ ಶಾಲೆಯನ್ನು ಅಭಿವೃದ್ಧಿಗೊಳಿಸಿದ್ದಾರೆ. ಸಮುದಾಯ ಭವನ, ಯುವಜನರಿಗಾಗಿ ವಾಲಿಬಾಲ್, ಕಬಡ್ಡಿ ಅಂಗಳ ಸಿದ್ಧಗೊಳ್ಳಲು ಇವರ ಶ್ರಮವೂ ಇದೆ. ಇವರು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಗ್ರಾಮಕ್ಕೆ ಭೇಟಿ ಕೊಟ್ಟಾಗ ಕಾಣಸಿಗುತ್ತವೆ.

ಇವರ ಕೆಲವೊಂದು ತೀರ್ಪುಗಳು ಸಾಮಾಜಿಕ ಕಾಳಜಿ ಮತ್ತು ಜನಪರ ನಿಲುವಿಗೆ ಸಾಕ್ಷಿಯಂತಿವೆ. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಪ್ರಕರಣದಲ್ಲಿ ಚರಾಸ್ತಿ ಮತ್ತು ಸ್ಥಿರಾಸ್ತಿ ವಿಲೇವಾರಿ ಇವರಿರುವ ಕೋರ್ಟ್ ಮುಂದೆ ಬಂದಿತ್ತು. ಇದೆಲ್ಲವೂ ಅಕ್ರಮ ಎಂದು ಸಾಬೀತಾದಾಗ ಆಸ್ತಿಯನ್ನು ಮಾರಾಟ ಮಾಡಿ ಹಣವನ್ನು ತಮಿಳುನಾಡು ಸರ್ಕಾರಿ ಶಾಲೆಗಳ ಅಭಿವೃದ್ಧಿ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಬಳಕೆ ಮಾಡಬೇಕೆಂದು ಈಚೆಗೆ ತೀರ್ಪು ನೀಡಿದ್ದಾರೆ. ವರದಿಯನ್ನು ಕೋರ್ಟ್‌ಗೆ ಸಲ್ಲಿಸುವಂತೆ ಆದೇಶಿಸಿ ನ್ಯಾಯಾಂಗದ ಹಿರಿಮೆ ಹೆಚ್ಚಾಗಲು ಕಾರಣೀಭೂತರಾಗಿದ್ದಾರೆ.

ಚಿತ್ರದುರ್ಗದಲ್ಲಿ ಸಿಜೆಎಂ ನ್ಯಾಯಾಧೀಶರಾಗಿದ್ದಾಗ ರೈಲ್ವೆ ಇಲಾಖೆ ವಶಪಡಿಸಿಕೊಂಡಿದ್ದ ರೈತರ ಜಮೀನಿಗೆ ಹೆಚ್ಚುವರಿ ಪರಿಹಾರ ನೀಡಲು ವಿಳಂಬವಾಗಿತ್ತು. ಸ್ವತಃ ರೈತರೇ ಆದ ಅವರು, ಪ್ಯಾಸೆಂಜರ್ ರೈಲು ಜಪ್ತಿಗೆ ಆದೇಶ ನೀಡಿ ಎಲ್ಲರೂ ಹುಬ್ಬೇರುವಂತೆ ಮಾಡಿದ ಪ್ರಕರಣ ಸಂಚಲನವನ್ನೇ ಸೃಷ್ಟಿಸಿತ್ತು.

ಚಿಂತಾಮಣಿ ರಾಮಲಕ್ಷ್ಮಮ್ಮ ಪ್ರಕರಣದಲ್ಲಿ ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಸಿಕೊಂಡ ಆರೋಪದ ಮೇಲೆ ಅವರ ಮನೆಯನ್ನು ಸರ್ವೆ ಅಧಿಕಾರಿಗಳು ನೆಲಸಮ ಮಾಡಿದ್ದರು. ವಾಸ್ತವವಾಗಿ ಆ ಮಹಿಳೆ ಒತ್ತುವರಿ ಮಾಡಿಕೊಂಡಿರಲಿಲ್ಲ. ಆ ಪ್ರಕರಣದಲ್ಲಿ ಅಧಿಕಾರಿಗಳ ಎಡವಟ್ಟು ಸಾಬೀತಾಗಿ, ಮನೆ ಧ್ವಂಸಗೊಳಿಸಲು ಯಾರೆಲ್ಲ ಅಧಿಕಾರಿಗಳು ಕಾರಣರಾದರೋ ಅವರ ಜೇಬಿನಿಂದ ಹಣ ಭರಿಸುವಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ಅವರು ವಿಚಾರಣಾಧೀನ ಅಧಿಕಾರಿಯಾಗಿದ್ದಾಗ ಆದೇಶ ನೀಡಿದ್ದರು. ಲೋಕಾಯುಕ್ತದಲ್ಲಿ ನಾಲ್ಕು ವರ್ಷ ಇಂಥ ಅನೇಕ ಜನಪರ ತೀರ್ಪು ನೀಡಿರುವ ಹೆಗ್ಗಳಿಕೆ ಇವರದ್ದು.

ರಾಜ್ಯದಲ್ಲಿ ಯಾವುದೇ ಜಿಲ್ಲಾ ನ್ಯಾಯಾಲಯಕ್ಕೆ ವರ್ಗಾವಣೆಗೊಂಡರೂ ಅಲ್ಲಿನ ನ್ಯಾಯಾಧೀಶರಿಗೆ ನೀಡುವ ಕ್ವಾಟ್ರಸ್‌ನಲ್ಲೇ ಕೈತೋಟ ಮಾಡುವುದು ಇವರಿಗಿರುವ ಹವ್ಯಾಸ. ಮನೆಗೆ ಬೇಕಾದ ತರಕಾರಿ, ಹೂವು ಬೆಳೆದು ನ್ಯಾಯಾಧೀಶರ ವಸತಿಗೃಹದಲ್ಲಿ ಹೊಸತನ ಸೃಷ್ಟಿಸುವ ಛಾತಿಯುಳ್ಳವರು.

ಶಿಷ್ಟಾಚಾರದ ಪ್ರಶ್ನೆ ಮುಂದಿಟ್ಟಾಗ, 'ನ್ಯಾಯಾಧೀಶರು ಹೆಚ್ಚು ಶಿಷ್ಟಾಚಾರ ಪಾಲಿಸಬೇಕಾಗುತ್ತದೆ. ಭಾರತೀಯ ನ್ಯಾಯಾಂಗ ವ್ಯವಸ್ಥೆಯಲ್ಲಿ ನ್ಯಾಯಾಧೀಶರು, ನ್ಯಾಯಮೂರ್ತಿಗಳು ಶಿಷ್ಟಾಚಾರ ಪಾಲಿಸುವುದು ಕರ್ತವ್ಯ. ಆದರೆ, ನಮ್ಮ ಬಿಡುವಿನ ಸಮಯದಲ್ಲಿ ಮನಸ್ಸಿಗೆ ಖುಷಿ ನೀಡುವ ಕೃಷಿಯಂತಹ ಚಟುವಟಿಕೆಯಲ್ಲಿ ತೊಡಗಲು ಯಾವುದೇ ಅಡ್ಡಿ ಇಲ್ಲ' ಎನ್ನುವ ಮಾತು ಅವರದ್ದು.

## ಮಗಳ ಸಾಧನೆ ತಂದೆಗೆ ಪ್ರೇರಣೆ

ಇವರ ಮಗಳು ಪ್ರಿಯಾ ಮೋಹನ್ ಅಂತರರಾಷ್ಟ್ರೀಯ ಅಥ್ಲೇಟಿಕ್ ಪಟು. ಅಂತರರಾಷ್ಟ್ರೀಯ ಮಟ್ಟದಲ್ಲಿ ಎಂಟು ಪದಕ ಪಡೆದಿದ್ದಾರೆ. ರಾಷ್ಟ್ರೀಯವಾಗಿ 25 ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ. ಸಾಕಷ್ಟು ಬೆಳ್ಳಿ–ಕಂಚು ಪದಕಗಳು 22 ವರ್ಷದ ಓಟಗಾರ್ತಿಗೆ ಒಲಿದಿವೆ. ಹಾಂಕಾಂಗ್, ನೇಪಾಳ, ಕಿನ್ಯಾ, ಸ್ವಿಟ್ಜರ್ಲೆಂಡ್, ದಕ್ಷಿಣ ಅಮೆರಿಕದ ಕೊಲಂಬಿಯಾದಲ್ಲಿ ನಡೆದ ಅಥ್ಲೇಟಿಕ್‌ನಲ್ಲಿ ತಮ್ಮ ಛಾಪು ಮೂಡಿಸಿ ಭಾರತದ ಹೆಮ್ಮೆಯನ್ನು ಹೆಚ್ಚಿಸಿದ್ದಾರೆ ಪ್ರಿಯಾ ಮೋಹನ್. ಈ ಕ್ಷೇತ್ರದಲ್ಲಿ ಪಾರಮ್ಯ ಸಾಧಿಸುವುದು ಅವರ ಗುರಿಯಾಗಿದೆ. ಕ್ರೀಡಾ ಕ್ಷೇತ್ರದ ಸಾಧನೆಗಾಗಿಯೇ 'ಪ್ರಜಾವಾಣಿ ಸಾಧಕರು 2022' ಪ್ರಶಸ್ತಿಗೂ ಭಾಜನರಾಗಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಹಬ್ಬತ್ತನಹಳ್ಳಿ ಪ್ರಿಯಾ ಮೋಹನ್ ಎಂದೇ ಗುರುತಿಸಿಕೊಂಡಿದ್ದಾರೆ. ವಿದೇಶಗಳಲ್ಲೂ ತುಮಕೂರಿನ ಹಬ್ಬತ್ತನಹಳ್ಳಿ ಪರಿಚಯವಾಗುತ್ತಿದೆ. ಊರಿನ ಅಭಿವೃದ್ಧಿ ಕಾರ್ಯಗಳಿಗೆ ಮಗಳ ಸಾಧನೆಯೇ ಸ್ಫೂರ್ತಿ ಎಂದು ಮೋಹನ್ ಅಭಿಮಾನದಿಂದ ಬೀಗುತ್ತಾರೆ.

ಗ್ರಾಮೀಣರ ಸೇವೆ ಮಾಡಬೇಕೆಂಬುದು ಪೂರ್ವಿಕರ ಒತ್ತಾಸೆ. ಅದರಂತೆ ಈ ಹಾದಿಯಲ್ಲಿ ಸಾಗುವ ಅಭಿಲಾಷೆ ಅವರದ್ದು. ಪತ್ನಿ ಚಂದ್ರಕಲಾ ವಿದ್ಯಾವಂತರು. ಅವರು ಕೂಡ ಗ್ರಾಮದ ಅಭಿವೃದ್ಧಿ ವಿಷಯದಲ್ಲಿ ಪತಿಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಅವರ ಪುತ್ರ ಸೋಹನ್ ಗೌಡ ಯುವ ವಕೀಲ. ಹೀಗೆ; ನ್ಯಾಯಾಲಯ, ಕೃಷಿ, ಕ್ರೀಡೆ ಇವೆಲ್ಲವೂ ಮೇಳೈಸಿರುವ ಚಿಕ್ಕ ಕುಟುಂಬ ಅವರದ್ದು.

ಪ್ರತಿಕ್ರಿಯಿಸಿ: feedback@sudha.co.in